ಕಥೆ

# ದೇವರು ನಕ್ಕುಬಿಟ್ಟ



**ಇಸ್ಮಾಯಿಲ್ ತಳಕಲ್**

ಕಲೆ: ಮುರಳೀಧರ್ ರಾಥೋಡ್

ತನ್ನ ಮನೆಗೊಂದು ಗ್ಯಾಸ್ ಸಿಲೆಂಡರ್ ತೆಗೆದುಕೊಳ್ಳಬೇಕೆನ್ನುವ ಬಹಳ ದಿನದ ಕನಸು ರಾತ್ರಿಯಿಡೀ ಕಾಡಿದ್ದಕ್ಕ ಬೆಳಗಾಮುಂಜಾಲೆ ನಿದ್ದಿ ಆವರಿಸಿಕೊಂಡಿತ್ತು ಮಾದೇವಿಗೆ. ಅದಕ್ಕ ಇವತ್ತು ಸೂರ್ಯ ಹುಟ್ಟಿದ ಎಷ್ಟೋ ಹೊತ್ತಿನ ಮ್ಯಾಲ ಎದ್ದ ಮಾದೇವಿ 'ಇನ್ನೆಷ್ಟು ದಿನ ಇನ್ನೂ ಈ ಒಲಿ ಉರಿಸಬೇಕೋ' ಎನ್ನುತ್ತಲೇ ಒಲಿಯ ಬೂದಿಯನ್ನು ಬಳಿದು ತಿಪ್ಪಿಗೆ ಸುರುವಿ ಅಡಿಗಿಗೆ ಒಣ ಕಟ್ಟಿಗೆಗಳನ್ನು ಜೋಡಿಸಿಟ್ಟಳು. ಒಲಿ ಮುಂದ ಕುಂತು ಅಡಿಗಿ ಮಾಡುವ ಅವಳಿಗೆ ಅನ್ನಕ್ಕಿಂತ ಹೆಚ್ಚು ತಾನೇ ಬೆಂದ ಹಾಗೆ ಅನಿಸುತ್ತಿತ್ತು. ಇವಳ ಗೆಳತಿಯರಾದ ಬಾಜುಮನಿ ದ್ಯಾಮಿ, ಮುಂದಿನ ಓಣಿಯ ರುದ್ರಿ ಈಗಾಗಲೇ ಗ್ಯಾಸ್ ಸಿಲೆಂಡರ್ ತೆಗೆದುಕೊಂಡು ಇವಳ ಹೊಟ್ಟೆಯಲ್ಲಿ ಕಿಚ್ಚನ್ನೂ ಮನಸಿನ್ಯಾಗ ಆಸೆಯನ್ನೂ ಹುಟ್ಟಾಕಿದ್ರಿಂದ ಇವಳ ತಲೆಯಲ್ಲೂ ಅದರ ಕಿಡಿ ಹೊತ್ತಿಕೊಂಡಿತ್ತು. ಇನ್ನೇನು ಹೊತ್ತಾತು ಅಂತ ಜ್ವಾಳದ ಸಂಗಟಿ ಮಾಡಾಕಂತ ಬಿಸಿನೀರು ಕುದ್ಯಾಕ ಒಲಿ ಮ್ಯಾಲ ಡಬರಿ ಇಟ್ಟು, ಒಲಿ ಲಗೂನ ಹತ್ತಲಾರದಕ್ಕ ಚೀಡ್ಗಿಗೆ ಬರತೊಡಗಿದ್ದಳು. ಒಲಿಯನ್ನ ಎಷ್ಟು ಊದಿದ್ರೂ ಅದರಾಗ ಬೆಂಕಿ ಹತ್ತದೆ ಮನಿ ಪೂರ್ತಿ ಹೊಗಿ ಅಡರಿ ಅವಳ ಕಣ್ಣುಗಳೊಳಗನ ಕೆಂಡ ಬಿತ್ತಾರಗತಿ ಅವು ಉರಿಯತೊಡಗಿದ್ದಕ್ಕ ಕಣ್ಣುಗಳನ್ನು ತಿಕ್ಕುತ್ತಲೇ ತನಗಾದ ಅಸಹನೆಗೆ ಕೈಗೆ ಸಿಕ್ಕ ವಸ್ತುಗಳ ಮೇಲೆ ಸಿಟ್ಟನ್ನು ವರ್ಗಾಯಿಸ್ತಾಯಿದ್ಲು.

'ಮುದೇಕಿ ಆದಿ ನೋಡು, ನೆಟ್ಟಗ ಅಡಿಗಿ ಮಾಡಾಕೂ ಬರಾಂಗಿಲ್ಲ ನಿಂಗ. ಇದೇನ್ ಎಬ್ಸಿದಿ ಹಾಳ್ ಹೊಗಿ?' ಎನ್ನುತ್ತಲೇ ಲ್ಯಾಟ್ರೀನ್‌ಗೆ ಹೋಗಿ ಒಳಬಂದ ಗಂಡ ಮೈಲೆಪ್ಪ ಬಯ್ಯತೊಡಗಿದ್ದ. ಅವರ ಈ ಜಂತಾಮನಿಯ ಗೋಡೆಗಳು ಇಂತಹ ಹೊಗಿಗೆ ಒಳಗೆಲ್ಲ ಕಪ್ಪಗಾಗಿ ಅಡಗಿಮನಿಯಲ್ಲಿದ್ದ ಪಾತ್ರೆಗಳಿಗೂ ಕರ್ರನೇ ಪದರು ಮೆತ್ತಿಕೊಂಡಿತ್ತು. ಲಗೂನ ಅಡಿಗಿ ಮಾಡಿ ಕಸಬರಿಗಿ ಮತ್ತು ಬುಟ್ಟಿ ಹೆಣಿಯಾಕ ಕೂಡಬೇಕೆಂದವಳಿಗೆ ಒಲಿ ಸತಾಯಿಸುತ್ತಿದ್ದಾಗಲೇ ಗಂಡ ಬಂದು ಬೈದಿದ್ದು ಇನ್ನಷ್ಟು ಅವಳನ್ನು ಕೆರಳಿಸಿತು.

'ಅಯ್ಯಾ ಗಣಮಗ, ನೀಯೇನ್, ಮಾಡಿಟ್ಟಿದ್ದು ನುಂಗಿ ಹೋಗ್ತಿ. ಅಡಿಗಿ ಮಾಡೋರ್ ಕಷ್ಟ ನಿಮ್ಗೇನ್ ತಿಳಿತೈತಿ? ಒಲಿಮುಂದ ಕುಂತು, ಬೆಂದು ನಿಮ್ ಹೊಟ್ಟಿ ತುಂಬ್ಸಾಕ ನಾವ್ ದಿನಾ ಇಲ್ಲಿ ನಮ್ಮನ್ನ ನಾವು ಸುಟ್ಕೊಂಬೇಕು. ಅದರ ಖಬರರ ಇರತೈತೇನು ನಿಮಗ? ಈ ಒಲಿಗೆ ಹೊಗ್ಗಿಂಡಿ ಕಟ್ಸು ಅಂತ ಹೇಳಾಕತ್ತಿ ನಾಕ್ ವರ್ಸಾತು, ನನ್ ಮಾತು ಕಿವ್ಯಾಗರ ಹಾಕ್ಕೊಂಡಿ? ಹೊಗ್ಗಿಂಡಿ ಇಲ್ಲಂದ್ರ ಹೊಗಿಯರ ಏಳ್ತೈತಿ, ಬೆಂಕಿಯರ ಹತ್ತತೈತಿ. ನಂಗ ಹೇಳಾಕ ಬಂದ ಸೂರ' ಎಂದಳು ಒಲಿಯನ್ನು ಊದುತ್ತಲೇ.

ಈಗ ಹೊಗಿ ಎದ್ದೈತಿ, ಇನ್ ಇಕಿ ಜೊತಿ ಹಾಕ್ಯಾಡ್ಕೊಂತ ನಿಂತ್ರ ಮಾತಿನ ಕಿಡಿ ಸೋಕಿ ಧಗ ಧಗ ಉರಿದುಬಿಟ್ಟಾಳು ಅಂತ ಅನಿಸಿ ಮೈಲೆಪ್ಪ ಅಲ್ಲಿಂದ ಕಾಲ್ಕಿತ್ತ. ಮಾದೇವಿ ಕೆಮ್ಮುತ್ತಲೇ ಉಸ್ ಉಸ್ ಅಂತ